**(ಇಂದು ದಿನಾಂಕ 02-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀ ಸವಾಲು: ವಾದಿ ಪರ ವಕೀಲರಿಂದ**

ನಾನು ಬ್ಲಾಕ ನಂ.165/2 ನ್ನು 1 ನೇ ಪ್ರತಿವಾದಿಯಿಂದ ಖರೀದಿ ಮಾಡಿರುತ್ತೇನೆ ಎಂದರೆ ಸರಿ. ಆತ ಖರೀದಿ ವ್ಯವಹಾರದಿಂದ ಪರಿಚಯಸ್ಥ. ಸುನೀಲ ಕಂಟಿ ಎನ್ನುವ ಮದ್ಯಸ್ಥಗಾರ 1 ನೇ ಪ್ರತಿವಾದಿಯನ್ನು ನನಗೆ ಪರಿಚಯ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಚಂದ್ರು ಬಾಡಗಿ 1 ನೇ ಪ್ರತಿವಾದಿಯನ್ನು ನನಗೆ ಪರಿಚಯ ಮಾಡಿಸಿರುತ್ತಾನೆ. ಚಂದ್ರು ಬಾಡಗಿ ನನಗೆ 1 ನೇ ಪ್ರತಿವಾದಿಯ ಆಸ್ತಿಯ ಮಾಹಿತಿಯನ್ನು ನೀಡಿರುತ್ತಾನೆ ಎಂದರೆ ಸರಿ. ಆ ಬಗ್ಗೆ ದಾಖಲೆಗಳನ್ನು ನೀಡಿರುತ್ತಾನೆ ಎಂದರೆ ಸರಿ. ದಾವಾ ಆಸ್ತಿ ದಾಖಲೆ ಪ್ರಕಾರ 1 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನಾನು ದಾಖಲೆಗಳನ್ನು ಪರಿಶೀಲಿಸಿರುತ್ತೇನೆ. ನಾನು ನನ್ನ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿ 1 ನೇ ಪ್ರತಿವಾದಿಯ ಅಜ್ಜನಿಗೆ ಭೂನ್ಯಾಯಮಂಡಳಿಯಿಂದ ಬಂದಿದ್ದು ನಂತರ ಪಾಲು ವಿಭಾಗದಲ್ಲಿ 1 ನೇ ಪ್ರತಿವಾದಿಗೆ ಬಂದಿರುತ್ತದೆ ಎಂದು ಬರೆದಿರುತ್ತೇನೆ ಎಂದರೆ ಸರಿ. ನಾವು ದಾವಾ ಆಸ್ತಿ ಖರೀದಿ ಮಾಡುವ ಕಾಲಕ್ಕೆ ವಾದಿಯರು ಅಪ್ರಾಪ್ತರಾಗಿದ್ದರು ಎಂದರೆ ಸರಿ. ಆ ಕುರಿತು ನ್ಯಾಯಾಲಯದಿಂದ ಆದೇಶ ಪಡೆದು ದಾವಾ ಆಸ್ತಿ ಖರೀದಿಸಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನುಕಡಿಮೆ ಬೆಲೆಗೆ ಖರಿದಿಸಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಹೆಚ್ಚುವರಿ ಹಣ ನೀಡಿರುತ್ತೇನೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುತ್ತೇನೆ ಎಂದರೆ ಸರಿ. ಎಷ್ಟು ಹೆಚ್ಚುವರಿ ಹಣ ಕೊಟ್ಟಿರುತ್ತೇನೆ ಎಂದು ಹೇಳಲು ಆಗುವುದಿಲ್ಲ. ಆ ಬಗ್ಗೆ ಅಕೌಂಟ ಇರುವುದಿಲ್ಲ. ಖರೀದಿ ಕರಾರು ಪತ್ರ ಆಗಿದ್ದು ಅದನ್ನು ಹಾಜರುಪಡಿಸಿರುವುದಿಲ್ಲ. 1 ನೇ ಪ್ರತಿವಾದಿಗೆ ಹೆಚ್ಚುವರಿ ಹಣ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಂಡತಿಯಿಂದ ಒಪ್ಪಿಗೆ ಪತ್ರ ಪಡೆದಿರುತ್ತೇವೆ ಎಂದರೆ ಸರಿ. 1 ನೇ ಪ್ರತಿವಾದಿ ಹೆಂಡತಿ ಆಕೆಯ ಪರವಾಗಿ ಮಾತ್ರ ಒಪ್ಪಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ.

ನಿ.ಡಿ.1 ಕ್ಕೆ ಲಗತ್ತಿರುವ ಸಮ್ಮತಿ ಪತ್ರದಲ್ಲಿ ಮಕ್ಕಳ ಪರವಾಗಿ ಸಮ್ಮತಿ ನೀಡಿರುತ್ತಾಳೆ ಎಂದು ಬರೆದಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಯ ಹೆಂಡತಿಗೆ ಯಾವುದೇ ಹಕ್ಕು ಇರಲಿಲ್ಲ ಮಕ್ಕಳಿಗೆ ಮಾತ್ರ ಹಕ್ಕು ಇತ್ತು ಎಂದರೆ ಸರಿಯಲ್ಲ. ಆಕೆಗೆ ಗಂಡ ಸತ್ತ ನಂತರ ಮಾತ್ರ ಹಕ್ಕು ಬರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹೆಂಡತಿ ಮಕ್ಕಳ ಪರವಾಗಿ ಹಕ್ಕು ಬಿಟ್ಟು ಕೊಡಲು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಜೂಜು ಆಡುವ ಚಟ ಇತ್ತು ಎಂದರೆ ಇರಬಹುದು ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿ ಹೆಂಡತಿ ಕೆಲಸ ಮಾಡುತ್ತಿದ್ದಳು ಎಂದರೆ ಸರಿ. ಆಕೆಗೆ ಚೆನ್ನಾಗಿ ವೇತನ ಬರುತ್ತಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯಿಂದ ಯಾವುದೇ ಆದಾಯ ಎದುರುದಾರರಿಂದ ಆತನ ಆರೋಗ್ಯ ಸರಿಯಾಗಿ ಇರಲಿಲ್ಲ ಎನ್ನುತ್ತಾರೆ. 1 ನೇ ಪ್ರತಿವಾದಿ ಹೆಂಡತಿ ಸರ್ಕಾರಿ ನೌಕರಳಾದ ಕಾರಣ ಅವರಿಗೆ ಮತ್ತು ಗಂಡನಿಗೆ ವೈದ್ಯಕೀಯ ಸೌಲಭ್ಯಗಳು ಇರುತ್ತದೆ ಎಂದರೆ ಇರಬಹುದು.

ದಾವಾ ಆಸ್ತಿ ಇತರ ಪ್ರತಿವಾದಿಗಳಿಗೆ ಬಾಗಬಾಗವಾಗಿ ಮಾರಾಟ ಮಾಡಿರುತ್ತೆನೆ ಎಂದರೆ ಸರಿ. ವಾದಿಯರಿಗೆ ದಾವಾ ಆಸ್ತಿಯಲ್ಲಿ ಹಕ್ಕು ಇರುವ ವಿಷಯ ಗೊತ್ತಿದ್ದರು ಕೂಡಾ ನಾನು ಖರೀದಿ ಮಾಡಿರುತ್ತೆನೆ ಎಂದರೆ ಸರಿಯಲ್ಲ. ವಾದಿಯರಿಗೆ ದಾವಾ ಆಸ್ತಿಯಲ್ಲಿ 1:4 ಅಂಶ ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ವಾದಿಯರ ಆಸ್ತಿಯನ್ನು ನಷ್ಟಗೊಳಿಸಿರುತ್ತೆವೆ ಎಂದರೆ ಸರಿಯಲ್ಲ. ನಾವು 1 ನೇ ಪ್ರತಿವಾದಿಗೆ ಮದ್ಯಪಾನ ಮಾಡಲು ಹಣ ನೀಡಿ ಆತನ ಆಸ್ತಿ ಖರೀದಿ ಮಾಡಿರುತ್ತೆವೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.